20-0-154
12.12.24

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರು ದಿನಾಂಕ:12-12-2024 ರಂದು ಪ್ರಸ್ತಾಪಿಸಿರುವ ಶೂನ್ಯವೇಳೆಗೆ ಮಾಹಿತಿ**

**ಶೂನ್ಯವೇಳೆಯ ಪ್ರಸ್ತಾಪ:**

ದೇಶದ ಸಹಕಾರಿ ಹೈನು ಉದ್ಯಮದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ (ಕೆ.ಎಂ.ಎಫ್) ತನ್ನದೇ ಛಾಪು ಮೂಡಿಸಿದೆ. ಕೆಎಂಎಫ್‌ನ ಜನಪ್ರಿಯ ಉತ್ಪನ್ನ ನಂದಿನಿ ಹಾಲು ಗುಣಮಟ್ಟದಲ್ಲಿ ಉತ್ತಮ ಸ್ಥಾನ ಕಾಯ್ದುಕೊಂಡಿದೆ. ಈಗಾಗಲೇ ನಂದಿನಿಯು ನೆರೆ ರಾಜ್ಯಗಳಲ್ಲದೆ ದೇಶ-ವಿದೇಶಗಳಲ್ಲೂ ಬೇರೆ ಬೇರೆ ಉತ್ಪನ್ನಗಳ ರೂಪದಲ್ಲಿ ಮಾರಾಟಗೊಳ್ಳುತ್ತಿದೆ. ನಂದಿನಿ ಬ್ರಾಂಡ್‌ನ ಟೆಟ್ರಾ ಪ್ಯಾಕ್ನ್ ಹಾಲು ಗಡಿಯಲ್ಲಿನ ಧೀರ ಯೋಧರ ಉದರವನ್ನು ಬೆಚ್ಚಗಾಗಿಸುತ್ತಿರುವುದು ಅಭಿಮಾನದ ದ್ಯೋತಕ. ಐರ್ಲೆಂಡ್ ಕ್ರಿಕೆಟ್ ಜೆರ್ಸಿಯಲ್ಲಿಯೂ ನಂದಿನಿ ಬ್ರಾಂಡ್ ರಾರಾಜಿಸಿ ಗಡಿ ದಾಟಿ ಇಷ್ಟೆಲ್ಲಾ ಜನಪ್ರಿಯತೆ ಹೆಚ್ಚಿಸಿಕೊಂಡಿರುವ ನಂದಿನಿಗೆ ರಾಷ್ಟ್ರ ರಾಜಧಾನಿಯಲ್ಲಿ ಬೇಡಿಕೆ ಹುಟ್ಟಿರುವುದು ಅಚ್ಚರಿ ಪಡುವಂತದ್ದು. ಇತ್ತೀಚಿಗೆ ದಿಲ್ಲಿ ಮಾರುಕಟ್ಟೆಗೆ ಲಗ್ಗೆ ಇಟ್ಟ ನಂದಿನಿ ಖ್ಯಾತಿಯ ಸಹಿಸಲಾಗದೆ ಉತ್ತರ ಭಾರತದ ಪ್ರತಿಷ್ಠಿತ ಹಾಲಿನ ಬ್ರಾಂಡ್‌ಗಳು ಅಡ್ಡಗಾಲು ಹಾಕುತ್ತಿರುವುದು ನಿಜಕ್ಕೂ ಬೇಸರದ ಸಂಗತಿ. ಈಗಾಗಲೇ ರಾಜಧಾನಿಯಲ್ಲಿ ವಿವಿಧ ರಾಜ್ಯಗಳ ಹಾಲಿನ ಉತ್ಪನ್ನಗಳು ಮಾರಾಟಗೊಳ್ಳುತ್ತಿದ್ದರೂ ಕೂಡ ನಂದಿನಿಯೂ ರಾಷ್ಟ್ರ ರಾಜಧಾನಿಯನ್ನು ಪ್ರವೇಶಿಸಿದ್ದು ಕೊಂಚ ತಡವಾಗಿರುವುದು ಸತ್ಯ ಸಂಗತಿ. ಅಷ್ಟರಲ್ಲಾಗಲೇ ಅಲ್ಲಿನ ಪ್ರತಿಷ್ಠಿತ ಹಾಲಿನ ಬ್ರಾಂಡ್‌ಗಳು ತಮ್ಮದೇ ಮಾರುಕಟ್ಟೆ ಸಾಮ್ರಾಜ್ಯ ಸ್ಥಾಪಿಸಿಕೊಂಡಿರುವುದು ವಾಸ್ತವ ಕೂಡ. ಒಂದು ರಾಷ್ಟ್ರದೊಳಗಿನ ವಿವಿಧ ರಾಜ್ಯಗಳ ನಡುವೆ ನೆಲ-ಜಲ, ವಿವಾದಗಳು ಏರ್ಪಡುವುದು ಸಾಮಾನ್ಯ. ಆದರೆ ಹಾಲು ಕೂಡ ಗದ್ದಲದ ಗೂಡಾಗಿರುವುದು ತೀರ ಕ್ಷುಲ್ಲಕ. ಗ್ರಾಹಕರ ಕೈಗೆ ಸೇರದಂತೆ ನೋಡಿಕೊಳ್ಳುವ ಉತ್ತರ ಭಾರತೀಯ ಹಾಲು ಸಂಸ್ಥೆಗಳ ಪಿತೂರಿ ಖಂಡನೀಯ. ಆರಂಭದಲ್ಲಿಯೇ ನಂದಿನಿ ಮಾರುಕಟ್ಟೆಯ ವಿಸ್ತರಣೆಗೆ ತೊಡಕು ಉಂಟುಮಾಡಿದರೆ ಕರ್ನಾಟಕದ ಹಾಲಿನ ಉತ್ಪನ್ನಗಳು ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ಹಿಂದೆ ಸರಿಯುತ್ತದೆ ಎಂಬ ಭ್ರಮೆಯಲ್ಲಿ ಉತ್ತರ ಭಾರತದ ಹಾಲಿನ ಸಂಸ್ಥೆಗಳು ಇರುವುದು ದುರ್ದೈವ. ಮಾರುಕಟ್ಟೆಯಲ್ಲಿ ಉತ್ಕೃಷ್ಟ ಗುಣಮಟ್ಟ, ಶುದ್ಧತೆಯಲ್ಲಿ ಪೈಪೋಟಿ ಎದುರಿಸುವ ಧೈರ್ಯ ತೋರುವ ಪ್ರಯತ್ನವನ್ನು ಇತರೆ ಕಂಪನಿಗಳು ವಹಿಸಬೇಕು. ಉತ್ತರ ಭಾರತದ ಹಾಲಿನ ಸಂಸ್ಥೆಗಳು ಕ್ಷುಲ್ಲಕ ರಾಜಕೀಯವನ್ನು ಕೈಬಿಟ್ಟು ಎಲ್ಲಾ ಬ್ರಾಂಡ್‌ಗಳಂತೆ ನಂದಿನಿಯನ್ನು ಅಪ್ಪಿಕೊಳ್ಳಲು ಹಲವಾರು ಪ್ರಯತ್ನಗಳನ್ನು ರಾಜ್ಯ ಸರ್ಕಾರ ವ್ಯವಸ್ಥಿತ ರೀತಿಯಲ್ಲಿ ಮಾರುಕಟ್ಟೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ಅಮೂಲ್ ಕಂಪನಿ ಜಾಹಿರಾತು ತರುವ ರೀತಿಯಲ್ಲಿ ಉತ್ತರ ಭಾರತದ ಗ್ರಾಹಕರ ಹೃದಯ ಸ್ಪರ್ಶಿಸಲು ಸಕಲ ಪ್ರಯತ್ನಗಳನ್ನು ಮಾಡಬೇಕು. ಈ ಸಾರ್ವಜನಿಕ ಮಹತ್ವದ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

**ಉತ್ತರ:**

ಕರ್ನಾಟಕ ಹಾಲು ಮಹಾಮಂಡಳವು ಕೆಎಂಎಫ್‌ನ "ನಂದಿನಿ" ಬ್ರಾಂಡ್‌ನಲ್ಲಿ ಪ್ರಸ್ತುತ 150 ಕ್ಕೂ ಅಧಿಕ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದ್ದು, ಸ್ಯಾಚೆ ಹಾಲು, ಮೊಸರು ಸೇರಿದಂತೆ ದೀರ್ಘ ಜೀವಿತಾವಧಿ ಹೊಂದಿರುವಂತಹ ಉತ್ಪನ್ನಗಳಾದ ತುಪ್ಪ, ಬೆಣ್ಣೆ, ಹಾಲಿನ ಪುಡಿ ಮತ್ತು ಯುಹೆಚ್‌ಟಿ ಸಂಸ್ಕರಿಸಿದ ಗುಡ್‌ಲೈಫ್ ಹಾಲು ಇತ್ಯಾದಿ ಚಿಲ್ಲರೆ ಉತ್ಪನ್ನಗಳ ಮಾರಾಟವನ್ನು PAN India ಜೊತೆಗೆ ಹೊರ ದೇಶಗಳಲ್ಲೂ ಸಹ ಮಾರಾಟ ವಿಸ್ತರಣೆ ಮಾಡುತ್ತಿರುತ್ತದೆ.

ಕರ್ನಾಟಕ ಹಾಲು ಮಹಾಮಂಡಳದ ಸಮಗ್ರ ವ್ಯಾಪಾರ ಯೋಜನೆಯಲ್ಲಿ "ಹಳ್ಳಿಯಿಂದ ದಿಲ್ಲಿಗೆ" ಎಂಬ ಶೀರ್ಷಿಕೆಯಡಿ ರಾಜ್ಯದ ಎಲ್ಲಾ ನಗರ, ತಾಲ್ಲೂಕು, ಗ್ರಾಮಿಣ ಭಾಗ ಹಾಗೂ ಪಟ್ಟಣಗಳಲ್ಲಿ ನಂದಿನಿ ಉತ್ಪನ್ನಗಳ ಲಭ್ಯತೆಗೆ ಯೋಜಿಸಲಾಗಿದೆ. ಅದರಂತೆ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಉತ್ಪನ್ನಗಳ ಮಾರಾಟಕ್ಕೆ ಸಗಟು ಮಾರಾಟಗಾರರು/ವಿತರಕರನ್ನು ನೇಮಕ ಮಾಡಿರುತ್ತದೆ.

--2

ಕರ್ನಾಟಕ ರಾಜ್ಯದ ನೆರೆ ರಾಜ್ಯಗಳ ಜೊತೆಗೆ ಉತ್ತರ ಭಾರತದ ರಾಜ್ಯಗಳಲ್ಲೂ ಸಹ ಉತ್ಕೃಷ್ಟ ಗುಣ ಮಟ್ಟದ ನಂದಿನಿ ಹಾಲು, ಮೊಸರು ಮತ್ತು ಮಜ್ಜಿಗೆ ದೊರೆಯುವಂತೆ ಮಾಡಲು ಕೆಎಂಎಫ್ ಈಗಾಗಲೇ ಹೈದರಾಬಾದ್, ಚೆನ್ನೈ, ಪುಣೆ, ಮುಂಬೈ, ಸೊಲ್ಲಾಪುರ, ನಾಗಪುರ ನಗರಗಳ ಜೊತೆಗೆ ಕೇರಳ, ಗೋವಾ ರಾಜ್ಯಗಳಲ್ಲಿ ಮಾರಾಟ ಮಾಡಲಾಗುತ್ತಿದ್ದು, ನಂದಿನಿ ಬ್ರ್ಯಾಂಡ್ ಪ್ರಚಾರ ಮತ್ತು ಮಾರಾಟ ವಿಸ್ತರಣೆಗೆ ಸತತವಾಗಿ ಕ್ರಮವಿಟ್ಟಿರುತ್ತದೆ. ಹೊರ ರಾಜ್ಯದ ನಗರ ಪ್ರದೇಶಗಳಲ್ಲಿ ನಂದಿನಿ ಸ್ಯಾಚೆ ಹಾಲು, ಮೊಸರು ಜೊತೆಗೆ ಉತ್ಪನ್ನಗಳ ಜಾಹೀರಾತು ಮತ್ತು ಪ್ರಚಾರ ಕಾರ್ಯಗಳನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ವ್ಯವಸ್ಥೆಗೆ ಅನುಗುಣವಾಗಿ ಕ್ರಮವಿಟ್ಟು ಮಾರಾಟವನ್ನು ಬಲಪಡಿಸಲಾಗುತ್ತಿದೆ.

ರಾಜ್ಯದ ಹೊರ ಭಾಗದಲ್ಲಿಯೂ ಸಹ ಮಾರುಕಟ್ಟೆಯನ್ನು ವೇಗವಾಗಿ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಜಾಗತಿಕ ಮತ್ತು ರಾಷ್ಟ್ರಮಟ್ಟದಲ್ಲಿ ನಂದಿನಿ ಬ್ರ್ಯಾಂಡ್ ಗುರುತಿಸುವಿಕೆ ಸಲುವಾಗಿ ಕೆಎಂಎಫ್ ಪ್ರೋ ಕಬ್ಬಡಿ ಬೆಂಗಳೂರು ಬುಲ್ಸ್ ತಂಡದ ಜೆರ್ಸಿ ಬ್ರ್ಯಾಂಡಿಂಗ್, ಟಿ-20 ವಿಶ್ವಕಪ್-2024ರ ಟೂರ್ನಿಯಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ತಂಡಗಳಾದ ಐರ್ಲೆಂಡ್ ಮತ್ತು ಸ್ಕಾಟ್ಲೆಂಡ್ ಜರ್ಸಿ ಬ್ರ್ಯಾಂಡಿಂಗ್ ಪ್ರಯೋಜಕತ್ವ ಮತ್ತು Indian Super League Football-2024ರ ಟೂರ್ನಿಯಲ್ಲಿ Central Branding ಪಡೆಯುವ ಮೂಲಕ ನಂದಿನಿ ಬ್ರ್ಯಾಂಡ್ ಪ್ರಚಾರ ಕೈಗೊಳ್ಳಲಾಗಿದ್ದು, ಇದರಿಂದ ಬ್ರ್ಯಾಂಡೆಡ್ ಇಮೇಜ್ ಗುರುತಿಸುವಿಕೆಯನ್ನು ಹೆಚ್ಚಿಸಲಾಗಿದೆ.

ಹೊರ ರಾಜ್ಯಗಳ ಮಾರುಕಟ್ಟೆ ಪ್ರದೇಶಗಳಲ್ಲಿ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿರುವಂತೆಯೇ ಹೈದರಬಾದ್, ಚೆನ್ನೈ ಹಾಗೂ ಗೋವಾ ರಾಜ್ಯದ ವಿವಿಧೆಡೆಗಳಲ್ಲಿ ನಂದಿನಿ ಪಾರ್ಲರ್ ಸ್ಥಾಪಿಸಲು ಕ್ರಮವಿಟ್ಟಿರುತ್ತದೆ.

ಕಳೆದ ನವೆಂಬರ್-2024 ರಲ್ಲಿ ಕೆಎಂಎಫ್ ದೆಹಲಿಯ ಮಾರುಕಟ್ಟೆಗೆ ನಂದಿನಿ ಹಾಲು, ಮೊಸರು ಬಿಡುಗಡೆ ಮಾಡಲಾಗಿದ್ದು, ಅಲ್ಲಿನ ಸ್ಥಳೀಯ ದಿನ ಪತ್ರಿಕೆಗಳು ಮತ್ತು ಸುದ್ದಿ ಮಾದ್ಯಮಗಳಲ್ಲಿ ಬ್ರಾಂಡ್ ಬಗ್ಗೆ ಅರಿವು ಮೂಡಿಸುವ ಜೊತೆಗೆ ನಂದಿನಿ ಹಾಲಿನ ಲಭ್ಯತೆ ಪ್ರಚಾರವನ್ನು ಮಾಡಲಾಗಿದೆ. ಅದೇ ರೀತಿ ದೆಹಲಿಯ e-commerce ಪ್ಲಾಟ್ ಫಾರಂಗಳಲ್ಲಿ ಜಾಹೀರಾತು ಪ್ರಚಾರವನ್ನು ಕೈಗೊಂಡು ಇವುಗಳ ಮೂಲಕವು ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟ ಮಾಡಿ ಮಾರುಕಟ್ಟೆಯನ್ನು ವಿಸ್ತರಿಸಿರುತ್ತದೆ.

ಮುಂದುವರೆದು, ದೆಹಲಿ ಪ್ರದೇಶದಲ್ಲಿರುವ ಪ್ರತಿಸ್ಪರ್ಧಿ ಹಾಲಿನ ಬ್ರ್ಯಾಂಡ್‌ಗಳ ಕಾರ್ಯ ಚಟುವಟಿಕೆಗಳನ್ನು ಗಮನದಲ್ಲಿಟ್ಟುಕೊಂಡು 'ನಂದಿನಿ' ಬ್ರ್ಯಾಂಡ್‌ನ ಉತ್ಪನ್ನಗಳ ಮಾರುಕಟ್ಟೆಯನ್ನು ಹೆಚ್ಚಿಸುವ ಸಲುವಾಗಿ ದೆಹಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಹಾಲು ಸಂಸ್ಕರಣ ಘಟಕಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಅವುಗಳ ಮೂಲಕ ಹಾಲು ಮಾರಾಟ ಜಾಲವನ್ನು ಹಂತ ಹಂತವಾಗಿ ಹೆಚ್ಚಿಸುವ ಯೋಜನೆಯನ್ನು ರೂಪಿಸಿರುತ್ತದೆ. ಅದೇ ರೀತಿ ಹೊರ ರಾಜ್ಯದ ಪ್ರಮುಖ ನಗರಗಳಾದ ದೆಹಲಿ, ಮುಂಬೈ, ಪುಣೆ, ಹೈದರಾಬಾದ್ ಪ್ರದೇಶಗಳಲ್ಲಿ ಹೋರ್ಡಿಂಗ್, ಬಸ್ ನಿಲ್ದಾಣ, ಬಸ್ ಜಾಹೀರಾತು, ಪತ್ರಿಕೆಗಳು, ದೃಶ್ಯ ಮಾಧ್ಯಮಗಳಲ್ಲಿ ಇನ್ನೂ ಹೆಚ್ಚಿನ ಪ್ರಚಾರ ಕೈಗೊಳ್ಳಲು ಯೋಜನೆಯನ್ನು ರೂಪಿಸಿದ್ದು, ಕೆಎಂಎಫ್ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸಲು ಮಹಾಮಂಡಳವು ವ್ಯವಸ್ಥಿತ ರೀತಿಯಲ್ಲಿ ಕ್ರಮ ಕೈಗೊಂಡಿರುತ್ತದೆ.

**ಕಡತ ಸಂಖ್ಯೆ: ಸಿಒ 34 ಸಿಸಿಬಿ 2025**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು